ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಬುಧವಾರ, ೧೭ನೇ ಆಗಸ್ಟ್ ೧೯೮೩/ಶ್ರಾವಣ ಮಾಸ ೧೯೦೫.

ವಿಧಾನ ಸೌಧದಲ್ಲಿರುವ ವಿಧಾನ ಸಭೆಯು ಸಭಾಂಗಣದಲ್ಲಿ ಸದನವು ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಡಿ. ಬಿ. ಚಂದ್ರೇಗೌಡರು) ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚನೆ

ಅಧ್ಯಕ್ಷರು —ಶ್ರೀ ಎಂ. ನಾಗಪ್ಪ, ಮಾಜಿ ವಿಧಾನ ಸಭಾ ಸದಸ್ಯರು ೬ನೇ ಸಾರ್ವತ್ರಿಕ ಚುನಾವಣೆಯಲ್ಲಿ ಕನಕಗಿರಿ ಕ್ಷೇತ್ರದಿಂದ ಈ ಸಭೆಗೆ ಆಯ್ಕೆಯಾಗಿದ್ದರು. ಅವರು ದಿನಾಂಕ ೧೩-೮-೧೯೮೩ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ನಿಧನ ಹೊಂದಿದ ಸದಸ್ಯರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳುಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು.)

ಅಧ್ಯಕ್ಷರು.— ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ಕಳ್ಳಂಬೆಳ್ಳ ಚುನಾವಣಾ ಕ್ಷೇತ್ರದಲ್ಲಿನ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು-ಯೋಜನೆ ಅಲ್ಪ ಪ್ರಮಾಣದ ನೀರು ಸರಬರಾಜು ಯೋಜನೆ.

೫೨ (೨) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ)—ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳಲು ಸೂಚಿಸಿರುವ ಹಾಗೂ ಬಾಕಿ ಉಳಿದಿರುವ ಯೋಜನೆಗಳು ಮತ್ತು ಸಣ್ಣ ನೀರು ಸರಬರಾಜು ಯೋಜನೆಯ ಸಂಖ್ಯೆಗಳೆಷ್ಟು,

(ಆ) ೧೯೮೨-೮೪ನೇ ಸಾಲಿನಲ್ಲಿ ತೆಗೆದಕೊಳ್ಳಲಿರುವ ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ಸಂಖ್ಯೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

೧. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳಲು ಸೂಚಿಸಿರುವ ಸಂಖ್ಯೆ ೮.

೨. ಬಾಕಿ ಉಳಿದಿರುವ ಯೋಜನೆಗಳು ೫

೩. ಸಣ್ಣ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳಲು ಸೂಚಿಸಿರುವ ಸಂಖ್ಯೆ ೫.

೪. ಬಾಕಿ ಉಳಿದಿರುವ ಸಣ್ಣ ನೀರು ಸರಬರಾಜು ಯೋಜನೆಯ ಸಂಖ್ಯೆ ೨

ಸರಕಾರ ಈ ವಿಷಯದಲ್ಲಿ ಅಂತಿಮ ತೀರ್ಮಾನ ಕೈಗೊಂಡಿಲ್ಲ.

ಶ್ರೀ ಬಿ ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಈ ಅಂಕಿಗಳಿಗೆ ಸಂಬಂಧಪಟ್ಟಂತೆ ಯಾವ ಯಾವ ಕಾರ್ಯಕ್ರಮಗಳನ್ನು ಯಾವ ಯಾವ ತಾಲ್ಲೂಕ್ಕಿಗೆ ಒಳಪಡಿಸಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೆ ?

ಶ್ರೀ ಅಬ್ದುಲ್ ನಜೀರ್ ನಾಬ್.—ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಏನು ಇದೆ ಇದು ೧೯೭೦-೭೯ ರಿಂದ ನಡೆದುಕೊಂಡು ಬಂದಿರುತ್ತದೆ. ಈ ಆರು ನೀರಾವರಿ ಯೋಜನೆಗಳು ಏನು ಇರುತ್ತವೆ ಇವುಗಳನ್ನು ಈ ವರ್ಷದಲ್ಲಿಯೇ ಮಾಡಬೇಕೆಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡ್‌ನವರಿಗೆ ಅಪ್ರೂವ್ ಮಾಡಿಕೊಟ್ಟಿದ್ದೇವೆ.

ಶ್ರೀ ಬಿ. ಗಂಗಣ್ಣ.—ತಾವು ಕೊಟ್ಟಿರತಕ್ಕಂಥ ಆ ಉತ್ತರದಲ್ಲಿ ಈ ಬಗ್ಗೆ ಸರ್ಕಾರ ಯಾವ ಅಂತಿಮ ತೀರ್ಮಾನವನ್ನೂ ತೆಗೆದುಕೊಂಡಿಲ್ಲವೆಂದು ಹೇಳಿರುತ್ತೀರಿ. ಒಂದು ವೇಳೆ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ತೀವ್ರಗತಿಯಲ್ಲಿ ಈ ಯೋಜನೆಗಳನ್ನು ಮುಗಿಸಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ೨೧೫ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿದೆ. ಈರೀತಿ ೨೧೫ ಯೋಜನೆಗಳ ಜೊತೆಗೆ ೨೦೧೫ ಯೋಜನೆಗಳಿಗೆ ೪೦ ಕೋಟಿ ರೂಪಾಯಿಗಳು ಬೇಕಾಗಿರುತ್ತದೆ. ನಮ್ಮ ಹತ್ತಿರ ೭ ಕೋಟಿ ರೂಪಾಯಿಗಳು ಮಾತ್ರ ಇರುತ್ತದೆ. ನಾವು ಇನ್ನೂ ಅನೇಕ ಕಡೆ ಹೊಸ ಯೋಜನೆಗಳಿಗೆ ಈ ವರ್ಷದೊಳಗೆ ಮಂಜೂರಾತಿ ಕೊಡಬೇಕಾಗಿದೆ. ಬೇಕಾದಷ್ಟು ಸದಸ್ಯರುಗಳಿಂದ ಬೇಡಿಕೆಯೂ ಕೂಡ ಬರುತ್ತಿದೆ. ಅದನ್ನೆಲ್ಲ ಕ್ರೋಢೀಕರಿಸಿ, ಸರ್ಕಾರ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೊಡುವುದಾದರೆ ಈ ವರ್ಷವೇ ಈ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಗಂಗಣ್ಣ.—ಸ್ವಾಮಿ, ೧೯೮೨-೮೩ರಲ್ಲಿ ಈ ತಾಲ್ಲೂಕ್ಕಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳಲು ಹಿಂದಿನ ಸರ್ಕಾರ ಮಂಜೂರಾತಿಯನ್ನು ಕೊಟ್ಟಿತ್ತು. ಆದ್ದರಿಂದ ಮಂಜೂರಾತಿ ಕೊಟ್ಟಿರತಕ್ಕಂಥ ಕೆಲಸಗಳನ್ನು ಈ ವರ್ಷ ತೆಗೆದುಕೊಳ್ಳತಕ್ಕಂಥ ಕೆಲಸ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೮೧-೮೨ ಮತ್ತು ೧೯೮೨-೮೩ರಲ್ಲಿ ಒಟ್ಟು ಎರಡುಸಾವಿರದ ಹದಿನೈದು ಯೋಜನೆಗಳನ್ನು ಮಾಡಲು ೪೦ ಕೋಟಿ ರೂಪಾಯಿಗಳನ್ನು ಕೇಳಿದ್ದಕ್ಕೆ ಈ ವರ್ಷ ಕೊಟ್ಟಿರತಕ್ಕದ್ದು ೭-೮ ಕೋಟಿ ರೂಪಾಯಿಗಳು ಮಾತ್ರ, ನಾವು ಈ ವರ್ಷದಲ್ಲಿ ೪೭೦ ಯೋಜನೆಗಳನ್ನು ತೆಗೆದುಕೊಂಡು ಪೂರ್ಣಗೊಳಿಸಬೇಕೆಂಬ ಉದ್ದೇಶ ಇದೆ. ಎಲ್ಲ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದರೆ ೪೮ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ಇದರಲ್ಲಿ ಆದ್ಯತೆಯ ಮೇರೆಗೆ ೪೭೦ ಹಳ್ಳಿಗಳಲ್ಲಿ ಯಾರು ೧೦ ಪರ್ಸೆಂಟ್ ಹಣವನ್ನು ಕೊಟ್ಟಿರುತ್ತಾರೆ ಅಂಥದ್ದಕ್ಕೆ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿದೆ, ಮತ್ತು ಎಲ್ಲಿ ಅಗತ್ಯವಾಗಿ ಬೋರ್‌ವೆಲ್‌ಗಳನ್ನು ತೆಗೆಯಬೇಕು, ಎಲ್ಲಿ ಓಪನ್ ವೆಲ್‌ಗಳನ್ನು ಕೊಡಬೇಕಾಗಿರುತ್ತದೆ ಅಲ್ಲಿಗೆ ತೀವ್ರ ಗಮನವನ್ನು ಕೊಡಲಾಗುತ್ತದೆ. ಯೋಜನೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆಂದು ಐನೂರು ರೂಪಾಯಿಗಳನ್ನು ಕೊಟ್ಟು ನಿಲ್ಲಿಸುವಂಥ ಕೆಲಸ ಮಾಡದೆ, ಪೂರ್ಣವಾಗಿ ಮಾಡಬೇಕು ಎನ್ನುವ ದೃಷ್ಟಿಯಿಂದ ಯೋಚನೆ ಮಾಡಿದ್ದೇವೆ.

ಶ್ರೀ ಎನ್. ಹಂಚ್ಯಪ್ಪಾಸ್ವಿಗೌಡ.—ಈ ಗ್ರಾಮಾಂತರ ಕುಡಿಯುವ ನೀರಿನ ಸರಬರಾಜು ಯೋಜನೆಗಳಿಗೆ ವರ್ಷೇವರ್ಷ ಕೇಂದ್ರ ಸರ್ಕಾರದವರೂ ಸಹ ಹಣದ ಸಹಾಯ ಮಾಡುತ್ತಾರೆಂಬ ಘೋಷಣೆಗಳು ಬರುತ್ತಿವೆ. ಆದ್ದರಿಂದ ಈ ವರ್ಷಕ್ಕೆ ಮತ್ತು ಮುಂದಿನ ವರ್ಷಕ್ಕೆ ಕೇಂದ್ರದಿಂದ ಹೆಚ್ಚು ಹಣವನ್ನು ಒತ್ತಾಯ ಮಾಡಿ ತರಿಸಲು ಸಾಧ್ಯವಿಲ್ಲವೇ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದರಲ್ಲಿ ಎರಡು ರೀತಿಯ ಕಾರ್ಯಕ್ರಮಗಳಿವೆ. ಒಂದು ಕೇಂದ್ರ ಸರ್ಕಾರದ ವಲಯದಿಂದ ಆಗುವಂತಹ ತ್ವರಿತ ಗತಿಯ ನೀರು ಸರಬರಾಜು ಯೋಜನೆ. ಎರಡನೆಯದು, ರಾಜ್ಯ ಸರ್ಕಾರದ ವಲಯದಲ್ಲಿ ಕೈಕೊಳ್ಳುವಂತಹ ನೀರು ಸರಬರಾಜು ಯೋಜನೆ. ಈ ಸಲ ಇಂತಹ ೪೬೦ ಯೋಜನೆಗಳನ್ನು ಕೈಕೊಳ್ಳಲು ಹಣವನ್ನು ಅಳವಡಿಸಲಾಗಿದೆ.

ಶ್ರೀ ಬಿ. ಗಂಗಣ್ಣ.—ಈಗ ನಮ್ಮ ಕ್ಷೇತ್ರ ಬಯಲ ಕ್ಷಾಮದ ಪರಿಸ್ಥಿತಿಗೆ ಒಳಗಾಗಿರುವುದರಿಂದ ನೀರಿನ ತೊಂದರೆ ಬಹಳವಾಗಿದೆ. ಇದನ್ನು ಮನಗಂಡು ಈಗ ಮಂಜೂರಾಗಿರುವ ಯೋಜನೆಗಳ ಕೆಲಸಗಳನ್ನು ಜಾಗ್ರತೆ ಮುಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗ ನೀರಿಗೆ ಅಭಾವವಿರುವ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸುವ ಕಾರ್ಯಕ್ರಮವನ್ನು ಮುಂದುವರೆಸುತ್ತೇವೆ. ಆದರೆ ಎಲ್ಲರಿಗೂ ಕೊಳವೆ ಮೂಲಕ ನೀರನ್ನು ಒದಗಿಸುವ ಕಾರ್ಯಕ್ರಮ ಏನಿದೆ. ಇದನ್ನು ಇಡೀ ರಾಜ್ಯದಲ್ಲಿ ಮಾಡಿ ಮುಗಿಸಬೇಕಾದರೆ ೮೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಒಂದೇ ವರ್ಷದಲ್ಲಿ ಎಲ್ಲ ಕಡೆಯೂ ಕೆಲಸ ಕೈಕೊಳ್ಳಲು ಸಾಧ್ಯವಿಲ್ಲವೆಂದುಕೊಂಡು ಈ ವರ್ಷ ೪೬೦ ಯೋಜನೆಗಳನ್ನು ಮಾತ್ರ ತೆಗೆದುಕೊಂಡು ಮುಗಿಸುತ್ತೇವೆ

ತಿಪಟೂರು ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿನ ಉಪಾಧ್ಯಾಯರು ಪ್ರಮಾಣ

೫೩. (೧) ಎಸ್. ಪಿ. ಗಂಗಾಧರಪ್ಪ (ತಿಪಟೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ತಿಪಟೂರು ತಾಲ್ಲೂಕಿನ ಸರಕಾರಿ ಶಾಲೆಗಳಲ್ಲಿ ಉಪಾಧ್ಯಾಯರ ಸಂಖ್ಯೆ ಇರಬೇಕಾದ ಸಂಖ್ಯೆಗಿಂತ ಕಡಿಮೆ ಇದ್ದು ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಇದನ್ನು ಸರಿಪಡಿಸಲು ಸರಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) —

(ಅ) ಬಂದಿದೆ.

(ಆ) ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ನೇಮಕಾತಿಗಾಗಿ ಜಿಲ್ಲಾ ಹಂಟ್ಟದ ನೇಮಕಾತಿ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯ ಮೂಲಕ ಎಲ್ಲಾ ಖಾಲಿ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುತ್ತದೆ. ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಎಲ್ಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಬೆಂಗಳೂರು ವಿಭಾಗದ ಸಹ ನಿರ್ದೇಶಕರು ಲೋಕಸೇವಾ ಆಯೋಗವನ್ನು ನೇಮಕಾತಿಗಾಗಿ ಕ್ರಮ ತೆಗೆದುಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

ಶ್ರೀ ಎಸ್. ಪಿ. ಗಂಗಾಧರಪ್ಪ.— ಪೇಟೆ ಶಾಲೆಗಳಲ್ಲಿ ಶಿಕ್ಷಕರು ಸರಿಯಾದ ಪ್ರಮಾಣದಲ್ಲಿ ಇರುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ಆರೆಂಟು ತಿಂಗಳುಗಳ ಕಾಲವಾದರೂ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರು ಇರುವುದಿಲ್ಲ. ಇದರಿಂದ ಇರುವಂತಹ ಶಿಕ್ಷಕರೇ ಪಾಡುಗರನ್ನು ಗುಡ್ಡೆ ಹಾಕಿಕೊಂಡು ಪಾಠ ಮಾಡುತ್ತಿದ್ದಾರೆ. ಆದ್ದರಿಂದ ಖಾಲಿ ಇರುವಂತಹ ಜಾಗಗಳಿಗೆ ಇನ್ನೂ ಎಷ್ಟು ದಿವಸಗಳಲ್ಲಿ ಶಿಕ್ಷಕರನ್ನು ಭರ್ತಿ ಮಾಡುತ್ತೀರಾ ಎಂಬುದನ್ನು ಖಚಿತವಾಗಿ ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಇನ್ನು ಎರಡು ತಿಂಗಳುಗಳಲ್ಲಿ ಈ ನೇಮಕಾತಿ ಆಗುತ್ತದೆಂಬ ವಿಶ್ವಾಸ ಸರ್ಕಾರಕ್ಕೆ ಇದೆ.

ಶ್ರೀ ಎಸ್. ಪಿ. ಗಂಗಾಧರಪ್ಪ.—ಈಗ ಗ್ರಾಮಾಂತರ ಪ್ರದೇಶಗಳ ಶಾಲೆಗಳಲ್ಲಿ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವ ಕಾರಣದಿಂದ ಅಲ್ಲಿ ಕಲಿಯುವವರು ಹೆಚ್ಚು ಅಂಕಗಳನ್ನು ಪರೀಕ್ಷೆಗಳಲ್ಲಿ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಇಂತಹವರಿಗೆ ಗ್ರೇಸ್-ಮಾರ್ಕ್ಸ್ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಎಲ್ಲೆಲ್ಲಿ ಉಪಾಧ್ಯಾಯರು ಇಲ್ಲ. ಅಂತಹ ಕಡೆಗಳಿಗೆ ಬೇರೆ ಕೆಲವು ಶಾಲೆಗಳಲ್ಲಿ ಹೆಚ್ಚುವರಿಯಾಗಿರುವಂತಹ ಉಪಾಧ್ಯಾಯರುಗಳನ್ನು ಕಳುಹಿಸಿಕೊಡಲು ವ್ಯವಸ್ಥೆ